**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 248/ 2024**

**ಚಾಸಾ-1, ಪ್ರಾಸಾ-1**

| | | |
|---|---|---|
| ಸಾಕ್ಷಿದಾರರ ಹೆಸರು | : | ತಲಹಾ ಕುರೇಷಿ @ ಮಹಮ್ಮದ್ ತಲಹಾ |
| ತಂದೆಯ ಹೆಸರು | : | ಅಬ್ರಾರ್ ಪಾಷಾ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಪೆನ್ಷನ್ ಮೊಹಲ್ಲಾ, ಹಾಸನ. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 27.07.2026**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2 ರಿಂದ 7 ನನಗೆ ಗೊತ್ತು, ಅವರು ನನ್ನ ಸ್ನೇಹಿತರು. ನ್ಯಾಯಾಲಯದ ಮುಂದಿರುವ ಆರೋಪಿ ನಮ್ಮ ಗಲ್ಲಿಯವರು.

2. ನನ್ನ ಮೇಲೆ ಹಲ್ಲೆ ಮಾಡಿರುವುದಾಗಿ ನಾನು ಆರೋಪಿತರ ವಿರುದ್ಧ ಯಾವುದೇ ದೂರನ್ನು ಕೊಟ್ಟಿಲ್ಲ. ಆರೋಪಿಗಳು ಯಾವತ್ತೂ ನನ್ನೊಂದಿಗೆ ಜಗಳ ತೆಗೆದು, ಕೆಟ್ಟ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿಲ್ಲ. ಬಸವೇಶ್ವರ ಕಲ್ಯಾಣ ಮಂಟಪದ ಬಳಿ ನನಗೆ ಅಪಘಾತವಾಗಿದ್ದ ಕಾರಣ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿರುವುದಾಗಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸಾಕ್ಷಿಯ ಹೇಳಿಕೆ ದೂರು ಇದ್ದು, ಅದನ್ನು ಸಾಕ್ಷಿಗೆ ತೋರಿಸಿದ ಕಾರಣಕ್ಕಾಗಿ ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಸಮಯದಲ್ಲಿ ಸೀಲುಮಾಡಲಾಗಿರುವ ಈ ಕೇಸಿನ ಮುದ್ದೆಮಾಲಿನ ಪ್ರತ್ಯೇಕ ಗಂಟನ್ನು, ಅದರ ಮೇಲಿರುವ ಸೀಲು ಸರಿ ಇದೆ ಎನ್ನುವುದನ್ನು ದೃಢಪಡಿಸಿಕೊಂಡು, ಎದುರುದಾರರ ವಕೀಲರ ಸಮಕ್ಷಮ ನ್ಯಾಯಾಲಯದ ಅನುಮತಿಯ ಮೇರೆಗೆ, ಬಿಚ್ಚಿ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ)

ನನಗೆ ಅಪಘಾತವಾಗಿದ್ದ ದಿನ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಗ್ರೇ ಬಣ್ಣದ ಶರ್ಟನ್ನು ಮು.ಮಾ 1 ಎಂದು ಮತ್ತು ಒಂದು ಬ್ಲ್ಯಾಕ್ ಜೀನ್ಸ್ ಪ್ಯಾಂಟನ್ನು ಕೇವಲ

ಸಾಕ್ಷಿಗೆ ತೋರಿಸಿದ ಕಾರಣಕ್ಕಾಗಿ ಮು.ಮಾ 2 ಎಂದು ಗುರುತಿಸಲಾಯಿತು.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

3. ದಿಃ 20.08.2024 ರಂದು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸಾ ಘಟಕದಲ್ಲಿ ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಆ ದಿನ ರಾತ್ರಿ 08.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ಲಕ್ಕಿ ಕ್ಯಾಂಟಿನ್ ಹತ್ತಿರ ಹೋಗಿ ಟೀ ಕುಡಿದು ವೆಂಕಟೇಶ್ವರ ಶಾಲೆಯ ಪಕ್ಕದಲ್ಲಿರುವಂತಹ ಹೇಮಾವತಿ ಆಸ್ಪತ್ರೆಗೆ ಹೋಗುವ ಗಲ್ಲಿ ರಸ್ತೆಯಲ್ಲಿ ಮೂತ್ರ ವಿಸರ್ಜನೆ ಮಾಡಿ ವಾಪಸ್ ಬರುತ್ತಿದ್ದಾಗ 4 ನೇ ಆರೋಪಿ ನನಗೆ ಸಿಕ್ಕಿದ್ದು, ಆತನೊಂದಿಗೆ ಮಾತನಾಡುತ್ತಿರುವಾಗ ಆತನ ಜೊತೆಯಲ್ಲಿದ್ದ 1 ನೇ ಆರೋಪಿ "ಏನೋ ಸೂಳೆ ಮಗನೆ ನಿಮ್ಮಪ್ಪನ ಸಾಬ್ರುನಾಕ್ಯಾಯ" ಎಂದು ಕೆಟ್ಟ ಶಬ್ದಗಳಿಂದ ಬೈದಿರುತ್ತಾನೆ ಇದನ್ನು ನಾನು ಪ್ರಶ್ನಿಸಿದ್ದಕ್ಕೆ 1 ನೇ ಆರೋಪಿ ಇಲ್ಲಿ ನನ್ನದೇ ಹವಾ ಎಂದು ಹೇಳಿದಾಗ ಉಳಿದ ಆರೋಪಿಗಳು ನನ್ನನ್ನು ಸಾಯಿಸುವ ಉದ್ದೇಶದಿಂದ ಕೈ ಮುಷ್ಠಿಯಿಂದ ಎಲ್ಲರೂ ನನ್ನ ಮುಖಕ್ಕೆ, ಮೂಗಿಗೆ, ತಲೆಗೆ, ಎಡಗಣ್ಣಿಗೆ ಮತ್ತು ತುಟಿಗೆ ಹೊಡೆದು ರಕ್ತಗಾಯಪಡಿಸಿದರು ಎಂದರೆ ಸರಿಯಲ್ಲ. ನಾನು ಕೆಳಗಡೆ ಬಿದ್ದಾಗ ಎಲ್ಲಾ ಆರೋಪಿಗಳು ಸೇರಿ ಕಾಲಿನಿಂದ ತುಳಿದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆಯಲ್ಲಿದ್ದ ಚಾಸಾ-2 ಮತ್ತು 3 ರವರು ಜಗಳ ಬಿಡಿಸಿದಾಗ ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿ ಸ್ಥಳದಿಂದ ಓಡಿ ಹೋಗಿದ್ದಾರೆ ಎಂದರೆ ಸರಿಯಲ್ಲ. ಗಾಯಗೊಂಡಿದ್ದ ನನ್ನನ್ನು ಚಾಸಾ-2 ಮತ್ತು 3 ರವರು ಹಾಸನದ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಘಟನೆ ಕುರಿತು ನಿಪಿ-1 ರಂತೆ ನಾನು ವೈದ್ಯಾದಿಕಾರಿಗಳ ಮುಂದೆ ದಿಃ 20.08.2024 ರಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮಾಡಿದ ಹಲ್ಲೆಯಿಂದ ನನ್ನ ಮೂಗಿನ ಮೂಳೆ ಮುರಿದಿತ್ತು ಮತ್ತು ಹಲ್ಲು ಉದುರಿ ಹೋಗಿತ್ತು ಎಂದರೆ ಸರಿಯಲ್ಲ. ನನಗೆ ಈಗ ತೋರಿಸಿದ ಪೋಟೋಗಳಲ್ಲಿ ನನ್ನ ಭಾವಚಿತ್ರವಿದೆ. ಸದರಿ ಪೋಟೋವನ್ನು ಕೇವಲ ಸಾಕ್ಷಿಗೆ ತೋರಿಸಿದ ಕಾರಣಕ್ಕಾಗಿ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಸದರಿ ಫೋಟೋದಲ್ಲಿ ನನಗೆ ಗಾಯವಾದ ಬಗ್ಗೆ ಕಾಣಿಸುತ್ತದೆ ಎಂದರೆ ಸರಿ. ಆರೋಪಿಗಳು ನನ್ನ ಮೇಲೆ ಹಲ್ಲೆ ಮಾಡಿರುವ ಬಗ್ಗೆ ನಿಪಿ-1 ರಂತೆ ದೂರು ನೀಡಿದ್ದರೂ ಸಹ ಅವರೊಂದಿಗೆ ರಾಜಿ ಮಾಡಿಕೊಂಡಿರುವ ಕಾರಣ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆಪಾದಿತರ ಪರ ವಕೀಲರಿಂದಃ</u>**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u>** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.